ಸಿ.ಡಬ್ಲೂ.-03 / ಪಿ.ಡಬ್ಲೂ-03

## ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.

## ಸಿ.ಸಿ.ನಂ. 350/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಸೋಮನಾಯಕ |
| ತಂದೆಯ ಹೆಸರು | : | ದೇವನಾಯಕ |
| ವಯಸ್ಸು | : | 71 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹೆಚ್.ಡಿ. ಕೋಟೆ ಟೌನ್. |

**ಸಾಕ್ಷಿಯನ್ನು ದಿನಾಂಕಃ 21.10.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ-1, ಚಾಸಾ-2, ಚಾಸಾ-4, ಚಾಸಾ-5 ಮತ್ತು ಆರೋಪಿ ನನಗೆ ಗೊತ್ತು. ದಿನಾಂಕಃ 04.05.2023 ರಂದು ಹೆಚ್.ಡಿ. ಕೋಟೆಯ, ಕಸಬಾ ಹೋಬಳಿ ಸ.ನಂ. 166/9 ರ 04 ಎಕರೆ ಜಮೀನಿನಲ್ಲಿ ನಾನು ವ್ಯವಸಾಯದ ಕೆಲಸ ಮಾಡುತ್ತಿದ್ದಾಗ ಪಕ್ಕದ ಜಮೀನಿನವನಾದ ಆರೋಪಿ ಬೆಳಿಗ್ಗೆ ಸಮಯ 10.00 ಗಂಟೆ ಸುಮಾರಿಗೆ ನಮ್ಮ ಜಮೀನಿಗೆ ಕಲ್ಲುಕಂಬ ನೆಡಲು ಬಂದಿರುತ್ತಾನೆ. ಆಗ ಚಾಸಾ-1 ಈ ಜಮೀನು ನನ್ನದು, ನನ್ನ ಜಮೀನಿಗೆ ಏಕೆ ಕಲ್ಲುಕಂಬ ನಡೆಲು ಬಂದಿದ್ದೀಯಾ ಎಂದು ಕೇಳಿದ್ದಕ್ಕೆ ಆರೋಪಿ ಬೋಳೀಮಗನೇ, ಸೂಳೇಮಗನೇ ಎಂದು ಇನ್ನಿತರ ಅವಾಚ್ಯ ಶಬ್ದಗಳಿಂದ ಬೈದು, ಇನ್ನೊಮ್ಮೆ ಈ ಜಮೀನಿಗೆ ಬಂದರೆ ಕೊಲೆ ಮಾಡುತ್ತೇನೆಂದು ಕೊಲೆ ಬೆದರಿಕೆ ಹಾಕಿರುತ್ತಾನೆ. ನಂತರ ನಾನು ಮತ್ತು ಚಾಸಾ-2 ಸ್ಥಳಕ್ಕೆ ಬಂದು

ಸಮಾಧಾನ ಮಾಡಿರುತ್ತೇವೆ. ಪಿರ್ಯಾದು ಕೊಟ್ಟ ದಿನವೇ ಬೆಳಿಗ್ಗೆ 10.30-10.45 ಗಂಟೆಯವರೆಗೆ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಘಟನೆ ನಡೆದ ಸ್ಥಳದ ಮಹಜರ್ ನ್ನು ಮಾಡಿರುತ್ತಾರೆ. ಸ್ಥಳ ಮಹಜರ್ ನ್ನು ಈಗಾಗಲೇ ನಿ.ಪಿ.-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿ.ಪಿ.-2(ಬಿ)** ಎಂದು ಗುರುತಿಸಲಾಯಿತು. ಘಟನೆಯ ಸಂಬಂಧ ಪೋಲೀಸರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಅರೋಪಿ ಪರ ವಕೀಲರು ಗೈರು ಹಾಜರಾಗಿದ್ದು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ: ಇರುವುದಿಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**